| | |
|---|---|
| AMBEDKAR | **ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ**<br>9ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01. |

**ದಿನಾಂಕ: 29.10.2014ರಂದು ಮಧ್ಯಾಹ್ನ 3.00ಗಂಟೆಗೆ ಡಿ.ದೇವರಾಜ ಅರಸು ಭವನ, ವಸಂತನಗರ, ಬೆಂಗಳೂರು ಇಲ್ಲಿ ನಡೆದ ನಿಗಮದ 202ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿಗಳು**

**ಹಾಜರಾತಿ**

| ಹೆಸರು ಮತ್ತು ಪದನಾಮ | |
|---|---|
| ಶ್ರೀ ಹೆಚ್.ಆಂಜನೇಯ,<br>ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಅಧ್ಯಕ್ಷರು,<br>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | ಅಧ್ಯಕ್ಷರು |
| ಶ್ರೀ ಎನ್. ಮಂಜುನಾಥ ಪ್ರಸಾದ್, ಭಾ.ಆ.ಸೇ.,<br>ಸರ್ಕಾರದ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ,<br>ಕರ್ನಾಟಕ ಸರ್ಕಾರ | ಸದಸ್ಯರು |
| ಶ್ರೀ.ಕೆ.ಸಿ.ಶ್ರೀರಾಮಯ್ಯ, ಕ.ಆ.ಸೇ., (ಎಸ್‌ಟಿಎಸ್)<br>ವ್ಯವಸ್ಥಾಪಕ ನಿರ್ದೇಶಕರು<br>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | ಸದಸ್ಯ ಕಾರ್ಯದರ್ಶಿ |
| ಶ್ರೀ ಹೀರಾನಾಯಕ್, ಕೆ.ಎ.ಎಸ್., (ಎಸ್‌ಟಿಎಸ್)<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ | ಸದಸ್ಯರು |
| ಶ್ರೀ ರಾಮಚಂದ್ರಯ್ಯ,<br>ಸರ್ಕಾರದ ಉಪ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, | ಸದಸ್ಯರು |

**ಗೈರು ಹಾಜರಿ:**

| | |
|---|---|
| ಶ್ರೀ. ಎಸ್.ಎನ್.ಜಯರಾಂ, ಭಾ.ಆ.ಸೇ.,<br>ಆಯುಕ್ತರು,<br>ಸಮಾಜ ಕಲ್ಯಾಣ ಇಲಾಖೆ, | ಸದಸ್ಯರು |
| ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು<br>ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ಭಾರತ ಸರ್ಕಾರ, ನವದೆಹಲಿ, | ಸದಸ್ಯರು |
| ನಿರ್ದೇಶಕರು,<br>ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ,<br>ಭಾರತ ಸರ್ಕಾರ, ನವದೆಹಲಿ | ಸದಸ್ಯರು |
| ಶ್ರೀಮತಿ ಎಲ್. ರಾಜೇಶ್ವರಿ<br>ಉಪ ಕಾರ್ಯದರ್ಶಿಗಳು,<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ | ಸದಸ್ಯರು |

ನಿಗಮದ ವ್ಯವಸ್ಥಾಪಕ ನಿರ್ದೇಶಕರು, ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಮತ್ತು ನಿಗಮದ ಅಧ್ಯಕ್ಷರು, ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಮತ್ತು ಹಾಜರಿದ್ದ ಮಂಡಳಿಯ ಸದಸ್ಯರನ್ನು ಸ್ವಾಗತಿಸಿದರು. ಸಭೆಗೆ ಕೋರಂ ಇರುವುದನ್ನು ಖಾತರಿಪಡಿಸಿ ಸಭೆ ನಡೆಸಬಹುದೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲಾಯಿತು. 202ನೇ ಆಡಳಿತ ಮಂಡಳಿಯ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ಮಾನ್ಯ ಸಚಿವರು ಹಾಗೂ ನಿಗಮದ ಅಧ್ಯಕ್ಷರನ್ನು ಕೋರಿದರು. 202ನೇ ಆಡಳಿತ ಮಂಡಳಿ ಸಭೆಯ ವಿಷಯವಾರು ನಡವಳಿ ಈ ಕೆಳಗಿನಂತಿದೆ.

**ವಿಷಯ ಸಂಖ್ಯೆ: 1 : 201ನೇ ನಿರ್ದೇಶಕರ ಮಂಡಳಿ ನಡವಳಿ ಅಂಗೀಕರಿಸುವ ಕುರಿತು**

ದಿನಾಂಕ:26.09.2014ರಂದು ನಡೆದ 201ನೇ ನಿರ್ದೇಶಕರ ಮಂಡಳಿಯು ತೆಗೆದುಕೊಂಡ ವಿಷಯವಾರು ತೀರ್ಮಾನಗಳ ನಡವಳಿಯನ್ನು ಸರ್ವ ಸದಸ್ಯರಿಗೂ ಕಳುಹಿಸಲಾಗಿತ್ತು. ಯಾವುದೇ ಸದಸ್ಯರುಗಳಿಂದ ಸದರಿ ನಡವಳಿಯ ಬಗ್ಗೆ ವ್ಯತಿರಿಕ್ತ ಅಭಿಪ್ರಾಯಗಳು ಬಂದಿರುವುದಿಲ್ಲವೆಂದು ಸಭೆಯ ಗಮನಕ್ಕೆ ತರಲಾಯಿತು ಮತ್ತು ನಡವಳಿಯನ್ನು ಯಥವತ್ತಾಗಿ ಅಂಗೀಕರಿಸುವ ಬಗ್ಗೆ ಸಭೆಯನ್ನು ಕೋರಲಾಯಿತು.

**ನಿರ್ಣಯ: 1 : ಸದಸ್ಯರಿಂದ ವ್ಯತಿರಿಕ್ತ ಅಭಿಪ್ರಾಯಗಳು ಬಾರದ ಕಾರಣ, ನಡವಳಿಯನ್ನು ಯಥಾವತ್ತಾಗಿ ಅಂಗೀಕರಿಸಲು ಸಭೆಯು ನಿರ್ಣಯಿಸಿತು.**

**ವಿಷಯ ಸಂಖ್ಯೆ: 2 : 201ನೇ ನಿರ್ದೇಶಕರ ಮಂಡಳಿ ನಡವಳಿ ಮೇಲೆ ಕೈಗೊಂಡ ಅನುಸರಣಾ ವರದಿ**

201ನೇ ಆಡಳಿತ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ಸಭೆಗೆ ವಿವರಿಸಲಾಯಿತು. ಸಭೆಯು ಅನುಸರಣಾ ವರದಿಯನ್ನು ಪರಾಂಭರಿಸಿತು ಮತ್ತು ಯಥಾವತ್ತಾಗಿ ಒಪ್ಪಲು ಚರ್ಚಿಸಿತು.

**ನಿರ್ಣಯ: 2 : ನಡವಳಿಗಳ ಮೇಲೆ ಕೈಗೊಂಡಿರುವ ಕ್ರಮಗಳನ್ನು ಪರಾಂಭರಿಸಿದ ಸಭೆಯು ಕ್ರಮಗಳನ್ನು ಯಥಾವತ್ತಾಗಿ ಒಪ್ಪಲು ನಿರ್ಣಯಿಸಿತು.**

**ವಿಷಯ ಸಂಖ್ಯೆ: 3 : APPROVAL OF DIRECTORS REPORT**

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ನಿಗಮದ 2013-14ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಾ, ನಿಗಮವು ಸಾಧಿಸಿರುವ ಪ್ರಗತಿಯನ್ನು ಸಭೆಗೆ ವಿವರಿಸಿದರು. ಸಭೆಯು ವರದಿಯನ್ನು ಪರಾಂಭರಿಸಿ ಈ ಕೆಳಗಿನಂತೆ ನಿರ್ಣಯ ಅಂಗೀಕರಿಸಿತು.

**ನಿರ್ಣಯ : 3 : "RESOLVED THAT the draft report of the Directors for the year 2013-14 along with addendum containing replies to observations of the auditors be and are hereby approved and that the same be singed by the Chairman or by any two Directors of the Corporation as per sub-section (4) of Section 217 of the Companies Act, 1956 [as per sub-section (6) of Section 134 of the Companies Act, 2013] ."**

**ವಿಷಯ ಸಂಖ್ಯೆ: 4 :** ನಿಗಮದ ವಿವಿಧ ಯೋಜನೆಗಳಲ್ಲಿ ಸಾಧಿಸಿದ ಪ್ರಗತಿಯನ್ನು ಸಮೀಕ್ಷೆ ನಡೆಸಿ ಮೌಲ್ಯಮಾಪನ ಮಾಡಿಸುವ ಕುರಿತು.

ವ್ಯವಸ್ಥಾಪಕ ನಿರ್ದೇಶಕರು ಮಾತನಾಡಿ ದಿನಾಂಕ:05.08.2014ರಂದು ಮಾನ್ಯ ಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ನಡೆದ ಮೈಸೂರು ಜಿಲ್ಲಾ ಪಂಚಾಯ್ತಿಯ ತ್ರೈಮಾಸಿಕ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಿಗಮದ ಎಲ್ಲಾ ಯೋಜನೆಗಳ ಕಾರ್ಯಕ್ರಮಗಳಲ್ಲಿ ಸೌಲಭ್ಯ ಸವಲತ್ತುಗಳನ್ನು ಪಡೆದಿರುವ ಫಲಾನುಭವಿಗಳ ಆರ್ಥಿಕ, ಸಮಾಜಿಕ ಹಾಗೂ ಶೈಕ್ಷಣಿಕವಾಗಿ ಸಬಲರಾಗುವ ಮೂಲಕ ಅವರ ಜೀವನಮಟ್ಟ ಸುಧಾರಣೆಯಾಗಿರುವ ಬಗ್ಗೆ ಸಮೀಕ್ಷೆ ನಡೆಸಬೇಕೆಂದು ಮತ್ತು ಸಮೀಕ್ಷಾ ವರದಿಯನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ಕಂದಾಯ ಸಚಿವರ ಅವಗಾಹನೆಗೆ ತರಬೇಕೆಂದು ಸೂಚಿಸಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು. ಮಾನ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರು ಮಾತನಾಡಿ ಇಲ್ಲಿಯವರೆಗೆ ನಿಗಮದ ವಿವಿಧ ಯೋಜನೆಗಳಡಿ ನೀಡಿರುವ ಸವಲತ್ತುಗಳ ಸದುಪಯೋಗದ ಬಗ್ಗೆ ಮೌಲ್ಯ ಮಾಪನವನ್ನು ವಿಶ್ವವಿದ್ಯಾನಿಲಯಗಳ ಎಂ.ಎಸ್.ಡಬ್ಲ್ಯೂ ವಿಭಾಗದಿಂದಾಗಲೀ ಅಥವಾ ಯೋಜನಾ ಇಲಾಖೆಯಲ್ಲಿ ನೋಂದಾಯಿಸಿ ಕೊಂಡಿರುವ ಎಂಪ್ಯಾನಲ್ ಏಜೆನ್ಸಿಗಳ ಮೂಲಕ ಸಮೀಕ್ಷೆ ಮಾಡಿಸಲು ಸಲಹೆ ನೀಡಿದರು.

**ನಿರ್ಣಯ: 4 : ಈ ವಿಷಯವನ್ನು ಸುದೀರ್ಘವಾಗಿ ಚರ್ಚಿಸಿದ ಸಭೆಯು ನಿಗಮದ ವಿವಿಧ ಯೋಜನೆಗಳಡಿ ಪ್ರಾರಂಭದಿಂದ ಇಲ್ಲಿಯವರೆಗೆ ಪ್ರಯೋಜನ ಪಡೆದಿರುವ ಎಲ್ಲಾ ಫಲಾನುಭವಿಗಳ ಮೌಲ್ಯ ಮಾಪನವನ್ನು ನೋಂದಾಯಿತ ಸಮೀಕ್ಷೆಗಾರರಿಂದ ಮಾಡಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಲು ನಿರ್ಣಯಿಸಿತು.**

**ವಿಷಯ ಸಂಖ್ಯೆ: 5 :** ನಿಗಮದ ಅಧಿಕಾರಿ/ನೌಕರರ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವ ಬಗ್ಗೆ.

ಸದರಿ ವಿಷಯವನ್ನು ಚರ್ಚಿಸಿದ ಆಡಳಿತ ಮಂಡಳಿಯು ಕೆಳಗಿನಂತೆ ನಿರ್ಣಯ ತೆಗೆದುಕೊಂಡಿತು.

**ನಿರ್ಣಯ: 5 : ಶ್ರೀ.ಎಸ್. ದೇವರಾಜು ರವರು ತಮ್ಮ ತಂದೆಯ ವೈದ್ಯಕೀಯ ಚಿಕಿತ್ಸೆಗಾಗಿ ರೂ.2,12,284/-ನ್ನು ಮುಂಗಡವಾಗಿ ಪಡೆದಿದ್ದು, ಬಿಲ್ಲಿನ ಮೊತ್ತ ರೂ.3,08,530/-ರಲ್ಲಿ ರೂ.1,75,285/- ಅರ್ಹ ಮೊತ್ತವನ್ನು ಹೊಂದಾಣಿಕೆ ಮಾಡಿಕೊಂಡು ಹೆಚ್ಚುವರಿಯಾಗಿ ಪಡೆದುಕೊಂಡಿರುವ ರೂ.37,539/-ಗಳನ್ನು ಬಡ್ಡಿಯೊಂದಿಗೆ ವಸೂಲಿ ಮಾಡಲು ನಿರ್ಣಯಿಸಲಾಯಿತು.**

**ವಿಷಯ ಸಂಖ್ಯೆ: 6 : ಶ್ರೀ.ಎಸ್.ಎಲ್.ಮಂಜುನಾಥ್ (ಸೇವೆಯಿಂದ ವಜಾಗೊಂಡಿರುವ ಜಿಲ್ಲಾ ವ್ಯವಸ್ಥಾಪಕರು) ಇವರನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪಿನಂತೆ ನಿಗಮದ ಸೇವೆಗೆ ಪುನರ್ ನೇಮಕ ಮಾಡಿಕೊಳ್ಳುವ ಬಗ್ಗೆ.**

ವ್ಯವಸ್ಥಾಪಕ ನಿರ್ದೇಶಕರವರು ಶ್ರೀ.ಎಸ್.ಎಲ್.ಮಂಜುನಾಥ್ ಇವರನ್ನು ಕರ್ನಾಟಕ ಉಚ್ಚನ್ಯಾಯಾಲಯ, ಧಾರವಾಡ ಸಂಚಾರಿ ಪೀಠವು ಇವರ ಮೇಲಿದ್ದ ಎಲ್ಲಾ ಆಪಾದನೆಗಳನ್ನು ರದ್ದುಪಡಿಸಿ ಆರೋಪ ಮುಕ್ತಗೊಳಿಸಿರುವುದರಿಂದ ನಿಗಮದ ಸೇವೆಗೆ ಮರುನೇಮಕ ಮಾಡಿಕೊಳ್ಳುವ ಸಂಬಂಧ ನಿಗಮದ ಕಾನೂನು ಸಲಹೆಗಾರರು ನೀಡಿರುವ ಅಭಿಪ್ರಾಯ ಹಾಗೂ ಮಾನ್ಯ ಲೋಕಾಯುಕ್ತ ಕಛೇರಿ ಪತ್ರ ವ್ಯವಹಾರ ಮಾಡಿರುವ ಬಗ್ಗೆ ಮತ್ತು ಲೋಕಾಯುಕ್ತ ಕಚೇರಿಯಿಂದ ಇನ್ನೂ ಯಾವುದೇ ಅಭಿಪ್ರಾಯ ಬಾರದೇ ಇರುವ ಬಗ್ಗೆ ಸಭೆಯ ಗಮನಕ್ಕೆ ತಂದು, ಸದರಿ ಅಧಿಕಾರಿಯನ್ನು ಪುನರ್ ನೇಮಕ ಮಾಡಿಕೊಳ್ಳುವ ಬಗ್ಗೆ ಅನುಮತಿ ಕೋರಿದರು. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರು ಮಾತನಾಡಿ ಈ ವಿಷಯದ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮತ್ತು ಸರ್ಕಾರದ ಕಾನೂನು ಇಲಾಖೆಯ ಅಭಿಪ್ರಾಯ ಪಡೆದು ನಂತರ ಮಂಡಳಿಯ ಸಭೆಗೆ ಮಂಡಿಸುವಂತೆ ಸೂಚಿಸಿದರು.

**ನಿರ್ಣಯ: 6 : ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮತ್ತು ಸರ್ಕಾರದ ಕಾನೂನು ಇಲಾಖೆಯ ಅಭಿಪ್ರಾಯ ಪಡೆಯಲು ವ್ಯವಸ್ಥಾಪಕ ನಿರ್ದೇಶಕರಿಗೆ ಮುಂದಿನ ಕ್ರಮ ಕೈಗೊಳ್ಳಲು ನಿರ್ಣಯಿಸಿತು.**

**ವಿಷಯ ಸಂಖ್ಯೆ: 7 : ಕುಮಾರಿ: ಪಿ. ರೂಪಿಣಿ ಬಿನ್ ಲೇಟ್ ಹೆಚ್.ಪುಟ್ಟೇಗೌಡ, ರವರಿಗೆ ನಿಗಮದಲ್ಲಿ ಅನುಕಂಪ ಆಧಾರದ ಮೇಲೆ 191ನೇ ನಿರ್ದೇಶಕ ಮಂಡಳಿ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಪುನರ್ ಪರಿಶೀಲಿಸುವ ಕುರಿತು.**

ಕು: ಪಿ. ರೂಪಿಣಿ ಬಿನ್ ಲೇಟ್ ಪುಟ್ಟೇಗೌಡ ಇವರಿಗೆ 191ನೇ ನಿರ್ದೇಶಕ ಮಂಡಳಿ ಸಭೆಯಲ್ಲಿ 2ನೇ ದರ್ಜೆ ಸಹಾಯಕರ ಹುದ್ದೆಗೆ ನೇಮಕ ಮಾಡಿಕೊಳ್ಳಲು ತೀರ್ಮಾನವಾಗಿತ್ತು. ನಿಗಮದಲ್ಲಿ 2ನೇ ದರ್ಜೆ ಸಹಾಯಕರ ಹುದ್ದೆಯು ಖಾಲಿ ಇಲ್ಲದೇ ಇರುವುದರಿಂದ ಈ ಹುದ್ದೆಗೆ ಸದರಿಯವರನ್ನು ಇಲ್ಲಿಯವರೆವಿಗೂ ನೇಮಕ ಮಾಡಿಕೊಳ್ಳಲು ಸಾಧ್ಯವಾಗಿರಲಿಲ್ಲ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು. ಮುಂದುವರೆದು, 191ನೇ ನಿರ್ದೇಶಕರ ಮಂಡಳಿ ಸಭೆಯಲ್ಲಿ ತೆಗೆದುಕೊಂಡಿದ್ದ ತೀರ್ಮಾನವನ್ನು ಪುನರ್ ಪರಿಶೀಲಿಸುವ ಸಂಬಂಧ ದಿವಂಗತರ ಮಗಳಾದ ಕು. ಪಿ. ರೂಪಿಣಿ ಇವರು ದಿನಾಂಕ:27.10.2014ರಂದು ಮನವಿ ಸಲ್ಲಿಸಿ, ತಾನು ಮೇ 2011ರಲ್ಲಿ ಅಂತಿಮ ಬಿ.ಕಾಂ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದು ತಕ್ಷಣ ತನಗೆ ಅಂಕಪಟ್ಟಿಗಳು ದೂರಕಲಿಲ್ಲವೆಂದು ಬೆಂಗಳೂರು ವಿಶ್ವವಿದ್ಯಾನಿಲಯವು ಅಂಕ ಪಟ್ಟಿಗಳನ್ನು ನೀಡಲು ಬಹಳ ಸಮಯ ತೆಗೆದುಕೊಂಡಿತೆಂದು, ಇತ್ತೀಚೆಗಷ್ಟೆ ತಾನು ಅಂಕಪಟ್ಟಿಗಳನ್ನು ಪಡೆಯಲು ಸಾಧ್ಯವಾಯಿತೆಂದು, ತಾನು ಎನ್.ಐ.ಐ.ಟಿ. ಸಂಸ್ಥೆಯಿಂದ 2008ರಲ್ಲಿ ಕಂಪ್ಯೂಟರ್‌ನಲ್ಲಿ ಸಿಸಿ++ ಮತ್ತು ಬೇಸಿಕ್ ತರಬೇತಿ ಪಡೆದಿದ್ದು, ತನಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಯನ್ನು ನೀಡಲು ಕೋರಿರುವ ವಿಷಯವನ್ನು ವ್ಯವಸ್ಥಾಪಕ ನಿರ್ದೇಶಕರು ಸಭೆಯ ಗಮನಕ್ಕೆ ತಂದರು. ಸಭೆಯು ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ಕು. ಪಿ. ರೂಪಿಣಿ ರವರು ನವೆಂಬರ್ 2011 ರಲ್ಲೇ ಅಂತಿಮ ಬಿ.ಕಾಂ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಬಗ್ಗೆ ದಾಖಲೆಗಳಿರುವುದನ್ನು ಸಭೆಯು ಗಮನಿಸಿತು. ಬೆಂಗಳೂರು ವಿಶ್ವವಿದ್ಯಾನಿಲಯವು ಅಂಕಪಟ್ಟಿಯನ್ನು ನೀಡಲು ತಡಮಾಡಿರುವುದನ್ನು ಸಹ ಸಭೆಯು ಗಮನಿಸಿತು. ಗಮನಿಸಿದ ನಂತರ, 191ನೇ ನಿರ್ದೇಶಕರ ಮಂಡಳಿಯಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಮಾರ್ಪಡಿಸುವುದು ಸೂಕ್ತವೆಂಬ ಅಭಿಪ್ರಾಯಕ್ಕೆ ಬಂದಿತು. ಕು: ಪಿ. ರೂಪಿಣಿ ಇವರು ಬಿ.ಕಾಂ ಪದವಿಯನ್ನು ಪಡೆದಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸಿರುವುದರಿಂದ, ಸದರಿಯವರು ಅನುಕಂಪದ ಆಧಾರದಲ್ಲಿ ಕೆಲಸ ಕೋರಿ ಅರ್ಜಿ ಸಲ್ಲಿಸಿರುವ ದಿನಾಂಕಕ್ಕೆ ಸದರಿಯವರ ವಿಧ್ಯಾರ್ಹತೆ ಬಿ.ಕಾಂ ಆಗಿತ್ತು ಎಂಬ ಅಂಶ ದೃಢಪಡುವುದರಿಂದ, ಸದರಿಯವರನ್ನು ಪ್ರಥಮ ದರ್ಜೆ ಹುದ್ದೆಗೆ ಅನುಕಂಪದ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದು ಸೂಕ್ತವೆಂಬ ತೀರ್ಮಾನಕ್ಕೆ ಬರಲಾಯಿತು.

**ನಿರ್ಣಯ: 7 : ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿದ ನಿರ್ದೇಶಕ ಮಂಡಳಿ ಸಭೆಯು 191ನೇ ನಿರ್ದೇಶಕ ಮಂಡಳಿ ಸಭೆಯಲ್ಲಿ ತೆಗೆದುಕೊಂಡಿರುವ ತೀರ್ಮಾನವನ್ನು ಮಾರ್ಪಡಿಸಿ ಕು:ಪಿ. ರೂಪಿಣಿ ಇವರು ಸಲ್ಲಿಸಿರುವ ಬಿ.ಕಾಂ ಅಂಕಪಟ್ಟಿ ಹಾಗೂ ಎನ್.ಐ.ಐ.ಟಿ. ಕೋರ್ಸ್ ಸರ್ಟಿಫಿಕೇಟ್ ಆಧಾರದಲ್ಲಿ ಸದರಿಯವರನ್ನು ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಅನುಕಂಪದ ಆಧಾರದಲ್ಲಿ ನೇಮಕ ಮಾಡಿಕೊಳ್ಳಲು ಸಭೆಯು ನಿರ್ಣಯಿಸಿತು.**